# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 254
2) ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ : 15-02-2023
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಎಷ್ಟು ಆಯ್ದ ಜಲಾಶಯಗಳಲ್ಲಿ "ತೇಲುವ ಪಂಜರಗಳಲ್ಲಿ ಮೀನುಕೃಷಿ" ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ;<br>(ವಿವರ ನೀಡುವುದು)</td><td>ರಾಜ್ಯದಲ್ಲಿ ಒಟ್ಟು 03 ಆಯ್ದ ಜಲಾಶಯಗಳಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ವಿವರಗಳು ಈ ಕೆಳಗಿನಂತಿದೆ:-
<table>
<tr><th>ಕ್ರ. ಸಂ</th><th>ಜಲಾಶಯಗಳ ಹೆಸರು</th><th>ಪಂಜರ ಕೃಷಿ ಗುತ್ತಿಗೆದಾರರ ಸಂಖ್ಯೆ</th><th>ಒಟ್ಟು ಮೊತ್ತ (ರೂ.ಗಳಲ್ಲಿ)</th></tr>
<tr><td>1</td><td>ಲಿಂಗನಮಕ್ಕಿ ಜಲಾಶಯ, ಶಿವಮೊಗ್ಗ ಜಿಲ್ಲೆ</td><td>01</td><td>10,000</td></tr>
<tr><td>2</td><td>ಕೆ.ಆರ್. ಸಾಗರ ಜಲಾಶಯ, ಮಂಡ್ಯ ಜಿಲ್ಲೆ.</td><td>14</td><td>3,40,000</td></tr>
<tr><td>3</td><td>ಆಲಮಟ್ಟಿ ಜಲಾಶಯ, ವಿಜಯಪುರ ಜಿಲ್ಲೆ.</td><td>06</td><td>1,20,000</td></tr>
<tr><td colspan="2">ಒಟ್ಟು</td><td>21</td><td>4,70,000</td></tr>
</table></td></tr>
<tr><td>ಆ)</td><td>ಜಲಾಶಯಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಗುತ್ತಿಗೆ ನೀಡುವಾಗ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳೇನು ಗುತ್ತಿಗೆದಾರರಿಗೆ ಯಾವ ಮಾನದಂಡಗಳ ಆಧಾರದ ಮೇಲೆ ಮೀನು ಕೃಷಿ ಕೈಗೊಳ್ಳಲು ಅವಕಾಶ ನೀಡಲಾಗುತ್ತದೆ;<br>(ವಿವರ ನೀಡುವುದು)</td><td>ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-38 ಮೀಇಇ 2021 ದಿನಾಂಕ: 21-06-2021 ರಂತೆ ಜಲಾಶಯಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಮಾನದಂಡಗಳನ್ನು ಪಾಲಿಸಲಾಗುತ್ತಿದೆ. ಸದರಿ ಆದೇಶದ ಪ್ರತಿ <u>ಅನುಬಂಧ-1</u>ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ಮಂಡ್ಯ ಜಿಲ್ಲೆ ಕೃಷ್ಣರಾಜ ಸಾಗರ (ಕೆ.ಆರ್.ಎಸ್) ಜಲಾಶಯದಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲಾಗಿದೆಯೇ:<br>ಹಾಗಿದ್ದಲ್ಲಿ, ಎಷ್ಟು ವರ್ಷಗಳಿಂದ ಕೈಗೊಳ್ಳಲಾಗಿದೆ: ನಿರ್ವಹಿಸುತ್ತಿರುವವರು ಯಾರು: ಹೊಸದಾಗಿ ಎಷ್ಟು ಅರ್ಜಿಗಳು ಸ್ವೀಕೃತವಾಗಿವೆ:<br>(ಸಂಪೂರ್ಣ ವಿವರ ನೀಡುವುದು)</td><td>ಮಂಡ್ಯ ಜಿಲ್ಲೆ ಕೃಷ್ಣರಾಜಸಾಗರ (ಕೆ.ಆರ್.ಎಸ್) ಜಲಾಶಯದಲ್ಲಿ ತೇಲುವ ಪಂಜರಗಳಲ್ಲಿ ಮೀನು ಕೃಷಿಯನ್ನು ಕೈಗೊಳ್ಳಲಾಗಿದೆ. ಮೀನುಗಾರಿಕೆ ಇಲಾಖೆ ವತಿಯಿಂದ 2012-13 ರಿಂದ ಪ್ರಾಯೋಗಿಕವಾಗಿ ಕೈಗೊಳ್ಳಲಾಗಿತ್ತು. ಪ್ರಸಕ್ತ 131 ತೇಲುವ ಪಂಜರಗಳನ್ನು ಮೀನು ಕೃಷಿಕರು ನಿರ್ಮಾಣ ಮಾಡಿ ಮೀನು ಸಾಕಾಣಿಕೆ ಮಾಡುತ್ತಿರುತ್ತಾರೆ. ಜಲಾಶಯದಲ್ಲಿ ತೇಲುವ ಪಂಜರಗಳಲ್ಲಿ ಮೀನು ಕೃಷಿಯನ್ನು ಕೈಗೊಳ್ಳಲು 2021-22ನೇ ಸಾಲಿನಲ್ಲಿ 16 ಅರ್ಜಿಗಳು ಮತ್ತು 2022-23ನೇ ಸಾಲಿನಲ್ಲಿ 38 ಅರ್ಜಿಗಳು ಸ್ವೀಕೃತವಾಗಿರುತ್ತವೆ.</td></tr>
</table>

| | | |
|---|---|---|
| ಈ) | ಕೆ.ಆರ್.ಎಸ್. ಜಲಾಶಯದಲ್ಲಿ ಯಾವ ತಳಿಯ ಮೀನನ್ನು ಬೆಳೆಸಲಾಗುತ್ತಿದೆ: ಮೀನುಮರಿ ಬಿತ್ತನೆ, ಮೀನು ಹಿಡುವಳಿ, ಮಾರಾಟ ಮತ್ತು ಆದಾಯ ಎಷ್ಟಿದೆ: (ವರ್ಷಾವಾರು ಮಾಹಿತಿ ನೀಡುವುದು) | ಕೆ.ಆರ್.ಎಸ್. ಜಲಾಶಯದಲ್ಲಿ ಭಾರತೀಯ ಗೆಂಡೆ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ್, ಸಾಮಾನ್ಯ ಗೆಂಡೆ ಇತ್ಯಾದಿ ಮೀನು ತಳಿಗಳನ್ನು ಬೆಳೆಸಲಾಗುತ್ತಿದೆ ಹಾಗೂ ಪಂಜರದಲ್ಲಿ ತಿಲಾಪಿಯ, ಪಂಗೇಷಿಯಸ್ ಹಾಗೂ ಮರಲ್ ಮೀನು ಸಾಕಾಣಿಕೆ ಮಾಡುತ್ತಿರುತ್ತಾರೆ. ಮೀನುಮರಿ ಬಿತ್ತನೆ, ಮೀನು ಹಿಡುವಳಿ, ಮಾರಾಟ ಮತ್ತು ಆದಾಯ ವರ್ಷವಾರು ಮಾಹಿತಿಯನ್ನು **<u>ಅನುಬಂಧ-2</u>**ರಲ್ಲಿ ನೀಡಲಾಗಿದೆ. |
| ಉ) | ಗುತ್ತಿಗೆ ಪಡೆಯುವ ಫಲಾನುಭವಿಗೆ ಸರ್ಕಾರದ ವತಿಯಿಂದ ನೀಡುವ ತಾಂತ್ರಿಕ, ಆರ್ಥಿಕ ನೆರವು ಮತ್ತು ಸವಲತ್ತುಗಳೇನು: | ಗುತ್ತಿಗೆ ಪಡೆಯುವ ಫಲಾನುಭವಿಗೆ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಜಲಾಶಯದಲ್ಲಿ ತೇಲುವ ಪಂಜರಗಳಲ್ಲಿ ಮೀನು ಕೃಷಿ ಅನುಷ್ಠಾನಗೊಂಡ ನಂತರದಲ್ಲಿ ಅನುದಾನ ಲಭ್ಯತೆ ಅನುಗುಣವಾಗಿ ಒಂದು ಘಟಕಕ್ಕೆ ರೂ. 3.00 ಲಕ್ಷಗಳಂತೆ ಪಂಜರ ನಿರ್ಮಾಣ ಹಾಗೂ ಪೂರಕ ವೆಚ್ಚಗಳಡಿ ಘಟಕಕ್ಕೆ 40% ಸಾಮಾನ್ಯ, 60% ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳಾ ವರ್ಗದ ಫಲಾನುಭವಿಗಳಿಗೆ ಸಹಾಯಧನ ನೀಡಲಾಗುವುದು. ಹಾಗೂ ಇಲಾಖೆ ಅಧಿಕಾರಿಗಳು ಮತ್ತು ವಿಜ್ಞಾನಿಗಳು ಕಾರ್ಯಕ್ರಮ ನಿರ್ವಹಣೆ ಬಗ್ಗೆ ಸೂಕ್ತ ಸಲಹೆಗಳನ್ನು ಹಾಗೂ ತರಬೇತಿಯನ್ನು ನೀಡಲಾಗುವುದು. |
| ಊ | ಮೀನು ಕೃಷಿಯಿಂದ ಜಲಾಶಯದ ನೀರು ಕಲುಷಿತವಾಗದಂತೆ ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: ಸರ್ಕಾರದ ವತಿಯಿಂದ ಮೇಲುಸ್ತುವಾರಿ ವಹಿಸಲಾಗುತ್ತದೆಯೇ? (ಸಂಪೂರ್ಣ ವಿವರ ನೀಡುವುದು) | ಮೀನು ಕೃಷಿಯಿಂದ ಜಲಾಶಯದ ನೀರು ಕಲುಷಿತವಾಗದಂತೆ ಸ್ಥಳೀಯ ಅಧಿಕಾರಿಗಳು ಹಾಗೂ ಇಲಾಖಾ ಹಿರಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಫಲಾನುಭವಿಗಳಿಗೆ ವೈಜ್ಞಾನಿಕ ಕ್ರಮಗಳ ಕುರಿತು ತಾಂತ್ರಿಕ ಸಲಹೆ ಸೂಚನೆಗಳನ್ನು ನೀಡುವ ಮೂಲಕ ಮೇಲುಸ್ತುವಾರಿ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-28 ಮೀಇಯೋ 2023

13/7/2023

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಅನುಬಂಧ - 1

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ.- ರಾಜ್ಯದಲ್ಲಿ ಆಯ್ದ ಜಲಾಶಯಗಳನ್ನು "ತೇಲುವ ಪಂಜರಗಳನ್ನು ಮೀನು ಕೃಷಿ" ಕೈಗೊಳ್ಳಲು ಗುತ್ತಿಗೆ ನೀಡುವಾಗ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/10/ಮೀಇಇ/2015, ದಿನಾಂಕ: 06-02-2016.
2) ತಿದ್ದುಪಡಿ ಸಂಖ್ಯೆ: ಪಸಂಮೀ/34/ಮೀಇಇ/2017, ದಿನಾಂಕ: 23-03-2017.
3) ಪತ್ರ ಸಂಖ್ಯೆ: DOF-TECHOBRS-49-2021, ದಿನಾಂಕ: 03-03-2021.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಕೈಗೊಳ್ಳಲು ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ಹಾಗೂ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲು ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ತಿದ್ದುಪಡಿಯಲ್ಲಿ, ಆದೇಶ ಸಂಖ್ಯೆ ಪಸಂಮೀ/10/ಮೀಇಇ/2015, ದಿನಾಂಕ: 06-02-2016 ರಲ್ಲಿನ 4 ಷರತ್ತು ಮತ್ತು ನಿಬಂಧನೆಗಳಿಗೆ ತಿದ್ದುಪಡಿಯನ್ನು ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಕಡಿಮೆ ವಿಸ್ತೀರ್ಣದಲ್ಲಿ ಹೆಚ್ಚು ಮೀನು ಉತ್ಪಾದನೆ ಮಾಡುವ ಸಲುವಾಗಿ ಹಾಗೂ ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ 2020-21 ನೇ ಸಾಲಿಗೆ 100 ಯೂನಿಟ್ ತೇಲುವ ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಗುರಿ ನಿಗದಿಪಡಿಸಲಾದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಆಯ್ದ 16 ಜಲಸಂಪನ್ಮೂಲಗಳಲ್ಲಿ ತೇಲುವ ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಆಸಕ್ತಿ ವ್ಯಕ್ತಪಡಿಸಿಕೆಯನ್ನು ಆಹ್ವಾನಿಸಿ ದಿನಾಂಕ: 02.01.2021ರ ಆವೃತ್ತಿಯ ಕನ್ನಡಪ್ರಭ ಮತ್ತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ ಪ್ರಕಟಣೆ ನೀಡಿ ವ್ಯಾಪಕ ಪ್ರಚಾರ ನೀಡಿ ಆಸಕ್ತಿ ವ್ಯಕ್ತಪಡಿಸಿ ಅರ್ಜಿ ಸಲ್ಲಿಸಲು ಕಡೆಯ ದಿ:18.01.2021 ನ್ನು ನಿಗದಿಪಡಿಸಲಾಗಿತ್ತು, ಹಾಗೂ ಸಂಬಂಧಪಟ್ಟ ಅಧೀನ ಅಧಿಕಾರಿಗಳಿಗೂ ಸಹ ವ್ಯಾಪಕವಾಗಿ ಪ್ರಚಾರ ಮಾಡಲು ಸಹ ಮಾಹಿತಿ ನೀಡಲಾಗಿತ್ತು. ಆದಾಗ್ಯೂ, ಕೇವಲ ಒಬ್ಬರು ಮಾತ್ರ ಆಸಕ್ತಿ ವ್ಯಕ್ತಪಡಿಸಿರುತ್ತಾರೆ. ಯಾವುದೇ ಸಂಘ ಸಂಸ್ಥೆಗಳು / ವ್ಯಕ್ತಿಗಳು / ಸ್ವಸಹಾಯ ಸಂಘಗಳು ಆಸಕ್ತಿ ವ್ಯಕ್ತಪಡಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

Kamakshi U.A.

ಹೆಚ್ಚಿನವರು ಅರ್ಜಿ ಸಲ್ಲಿಸದಿರುವ ಬಗ್ಗೆ ಅಧೀನಾಧಿಕಾರಿಗಳನ್ನು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಶ್ನಿಸಲಾಗಿ ತೇಲುವ ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಜಲಾಶಯಗಳನ್ನು ಗುತ್ತಿಗೆ ನೀಡುವಾಗ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು ಅತ್ಯಂತ ಕಠಿಣವಾಗಿರುವುದರಿಂದ ತೇಲುವ ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಯಾರು ಮುಂದೆ ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ಷರತ್ತು ಮತ್ತು ನಿಬಂಧನೆಗಳನ್ನು ಸಡಿಲಪಡಿಸಿದಲ್ಲಿ ಹೆಚ್ಚಿನ ಜನರು ತೇಲುವ ಪಂಜರ ಸ್ಥಾಪಿಸಲು ಮುಂದೆ ಬರುತ್ತಾರೆ ಹಾಗೂ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಮಂಜೂರಾಗಿರುವ ಅನುದಾನವನ್ನು ಉಪಯೋಗಿಸಿಕೊಳ್ಳುವ ಜೊತೆಗೆ ಒಟ್ಟಾರೆ ಮೀನು ಉತ್ಪಾದನೆ ಹೆಚ್ಚಿಸುವಲ್ಲಿ ಮತ್ತು ಮೀನು ಕೃಷಿಕರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ತಿಳಿಸಿರುತ್ತಾರೆ

ಈ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ: ಪಸಂಮೀ/10/ಮೀಇಇ/2015, ದಿನಾಂಕ: 06-02-2016 ಮತ್ತು ತಿದ್ದುಪಡಿ ಸಂಖ್ಯೆ: ಪಸಂಮೀ/34/ಮೀಇಇ/2017, ದಿನಾಂಕ: 23-03-2017ರ ಸರ್ಕಾರಿ ಆದೇಶಗಳನ್ನು ರದ್ದುಪಡಿಸಿ, ಜಲಾಶಯಗಳಲ್ಲಿ ತೇಲುವ ಪಂಜರಗಳ ಮೀನು ಕೃಷಿ ಯೋಜನೆಯ ಅನುಷ್ಠಾನಕ್ಕಾಗಿ ಅಧಿಕಾರಯುಕ್ತ ಸಮಿತಿ ರಚಿಸಿ ಹಾಗೂ ಅನುಬಂಧ-1 ರಲ್ಲಿನ ಷರತ್ತು ನಿಬಂಧನೆಗಳಿಗೆ ಅನುಮೋದನೆ ನೀಡಿ ಹೊಸದಾಗಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ

**ಆದೇಶ ಸಂಖ್ಯೆ: ಪಸಂಮೀ ಇ-38 ಮೀಇಇ 2021, ಬೆಂಗಳೂರು, ದಿನಾಂಕ: 21-06-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ: ಪಸಂಮೀ/10/ಮೀಇಇ/2015, ದಿನಾಂಕ: 06-02-2016 ಮತ್ತು ತಿದ್ದುಪಡಿ ಸಂಖ್ಯೆ: ಪಸಂಮೀ/34/ಮೀಇಇ/2017, ದಿನಾಂಕ: 23-03-2017ರ ಆದೇಶಗಳನ್ನು ರದ್ದುಪಡಿಸಲಾಗಿದೆ. ಮುಂದುವರೆದು, "ತೇಲುವ ಪಂಜರಗಳಲ್ಲಿ ಮೀನು ಕೃಷಿ" ಯೋಜನೆಯ ಅನುಷ್ಠಾನಕ್ಕಾಗಿ ಕೆಳಕಂಡಂತೆ ಅಧಿಕಾರಯುಕ್ತ ಸಮಿತಿಯನ್ನು ರಚಿಸಲಾಗಿದೆ ಹಾಗೂ ಸದರಿ ಯೋಜನೆಯನ್ನು ಈ ಆದೇಶದ **ಅನುಬಂಧ-1** ರಲ್ಲಿ ನಮೂದಿಸಿರುವ ಷರತ್ತು ನಿಬಂಧನೆಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ. ಸಂ. | ಸಮಿತಿ ಸದಸ್ಯರುಗಳು | |
|---|---|---|
| 1. | ಮೀನುಗಾರಿಕೆ ನಿರ್ದೇಶಕರು | ಅಧ್ಯಕ್ಷರು |
| 2. | ಮುಖ್ಯಸ್ಥರು, ಕೇಂದ್ರೀಯ ಒಳನಾಡು ಮೀನುಗಾರಿಕಾ ಸಂಶೋಧನಾ ಕೇಂದ್ರ, ಬೆಂಗಳೂರು ಅಥವಾ ಅವರ ಪ್ರತಿನಿಧಿ ವಿಜ್ಞಾನಿ (CIFRI) | ಸದಸ್ಯರು |
| 3. | ಪ್ರಾಧ್ಯಾಪಕರು, FRIC, ಹೆಬ್ಬಾಳ | ಸದಸ್ಯರು |

Kamakshi U A

| | | |
|---|---|---|
| 4. | ಸಂಬಂಧಪಟ್ಟ ಜಲಾಶಯದ ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರು | ಸದಸ್ಯರು |
| 5. | ಮೀನುಗಾರಿಕೆ ಜಂಟಿ ನಿರ್ದೇಶಕರು (ಒಳನಾಡು) | ಸದಸ್ಯ ಕಾರ್ಯದರ್ಶಿ |

ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆಯ್ಕೆ ಸಮಿತಿಯು ಆಯ್ಕೆ ಮಾಡಿದ ಫಲಾನುಭವಿಗೆ ಸರ್ಕಾರದ ಅನುಮೋದನೆ ಪಡೆದನಂತರ ನಿರ್ದೇಶಕರು. ಮೀನುಗಾರಿಕೆ ಇಲಾಖೆ ಇವರು ಮಂಜೂರಾತಿ ಆದೇಶ ನೀಡಲು ಕ್ರಮಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 21/6/21
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)
TK 21.6.2021

ಇವರಿಗೆ

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ. ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಸಮಿತಿಯ ಎಲ್ಲಾ ಸದಸ್ಯರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7) ಸರ್ಕಾರದ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
8) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.

ಆದೇಶ ಸಂಖ್ಯೆ: ಪಸಂಮೀ ಇ-38 ಮೀಇಇ 2021, ಬೆಂಗಳೂರು, ದಿನಾಂಕ: 21-06-2021ರ

## ಅನುಬಂಧ-1

## ತೇಲುವ ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಜಲಾಶಯಗಳನ್ನು ಗುತ್ತಿಗೆ ನೀಡುವಾಗ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು

1. ರೂ 2000/- ಗಳನ್ನು ಪಾವತಿಸಿ ಅರ್ಜಿಯನ್ನು ಪಡೆದುಕೊಳ್ಳತಕ್ಕದ್ದು.
2. ರಾಜ್ಯದಲ್ಲಿರುವ ಆಯ್ದ ಮಧ್ಯಮ ಅಥವಾ ದೊಡ್ಡ ಜಲಾಶಯಗಳಲ್ಲಿ ತೇಲುವ ಪಂಜರದಲ್ಲಿ "ಮೀನು ಕೃಷಿ" ಕೈಗೊಳ್ಳಲು ಮೀನುಗಾರಿಕೆ ಇಲಾಖೆಯಿಂದ ಗರಿಷ್ಟ 10 ವರ್ಷಗಳಿಗೆ ಗುತ್ತಿಗೆ ನೀಡತಕ್ಕದ್ದು.
3. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ಮೇಲುಸ್ತುವಾರಿ ಮಾಡಲು "ಅಧಿಕಾರಿಯುಕ್ತ ಸಮಿತಿ" ಯನ್ನು ರಚಿಸಲಾಗಿದೆ. ಈ ಸಮಿತಿಯು ಸಮರ್ಥ ಉದ್ಯಮಿ/ವ್ಯಕ್ತಿ/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಗುತ್ತಿಗೆ ಪಡೆಯಲು ಸಲ್ಲಿಸುವ ಅರ್ಜಿಗಳನ್ನು ಪಾರದರ್ಶಕ ನಿಯಮಾನುಸಾರ ಪರಿಗಣಿಸಿ ಆಯ್ಕೆ ಮಾಡಲು ಹಾಗೂ ಸ್ಥಳವನ್ನು ಹಂಚಿಕೆ ಮಾಡುವುದು ಅಧಿಕಾರಯುಕ್ತ ಸಮಿತಿಯ ಜವಾಬ್ದಾರಿಯಾಗಿರುತ್ತದೆ.
4. ಆಯ್ದ ಜಲಾಶಯಗಳ ಜಲವಿಸ್ತೀರ್ಣದ ಗರಿಷ್ಠ ಶೇ 2 ರ ಭಾಗದಲ್ಲಿ "ಪಂಜರದಲ್ಲಿ ಮೀನು ಕೃಷಿ" ಕೈಗೊಳ್ಳಲು ಗುತ್ತಿಗೆ ನೀಡತಕ್ಕದ್ದು. ಪ್ರತಿ ಘಟಕದ ಜಲವಿಸ್ತೀರ್ಣವನ್ನು 0.25 ಹೆಕ್ಟೇರ್ ಸೀಮಿತಗೊಳಿಸಿದೆ. ಒಬ್ಬ ಯಶಸ್ವಿ ಅರ್ಜಿದಾರರಿಗೆ ಒಂದು ಜಲಾಶಯದಲ್ಲಿ ಗರಿಷ್ಠ 4(ನಾಲ್ಕು) ಘಟಕಗಳನ್ನು ಮಾತ್ರ ಗುತ್ತಿಗೆ ನೀಡತಕ್ಕದ್ದು.
5. ವಾರ್ಷಿಕ ಗುತ್ತಿಗೆ ಅವಧಿಯು ಅಕ್ಟೋಬರ್ 1 ಕ್ಕೆ ಪ್ರಾರಂಭವಾಗಿ ಮುಂದಿನ ವರ್ಷದ ಸೆಪ್ಟೆಂಬರ್ 30ಕ್ಕೆ ಮುಕ್ತಾಯವಾಗುತ್ತದೆ.
6. ಪ್ರತಿ ಘಟಕಕ್ಕೆ ಕನಿಷ್ಠ ರೂ.20,000/- ಗಳ ವಾರ್ಷಿಕ ಗುತ್ತಿಗೆ ಮೊತ್ತ ನಿಗದಿಪಡಿಸುವುದು. ಉಳಿದ 9 ವರ್ಷಗಳಿಗೆ ಹಿಂದಿನ ವರ್ಷದ ಗುತ್ತಿಗೆ ಮೊತ್ತಕ್ಕೆ ಶೇಕಡಾ 10% ರಷ್ಟು ಗುತ್ತಿಗೆ ಮೊತ್ತ ಹೆಚ್ಚಿಸತಕ್ಕದ್ದು.
7. ಸರ್ಕಾರ ನಿಗದಿಪಡಿಸಿದ ಮೊದಲನೇ ವರ್ಷದ ಗುತ್ತಿಗೆ ಮೊತ್ತ ಹಾಗೂ ಠೇವಣಿ ಮೊತ್ತವನ್ನು ಆಯ್ಕೆಯಾದ ಅರ್ಜಿದಾರರು ಕರಾರು ಪತ್ರದೊಡನೆ ಸಲ್ಲಿಸುವುದು ಉಳಿದ ವರ್ಷಗಳ ಗುತ್ತಿಗೆಯನ್ನು ಮುಂದಿನ ವರ್ಷ ಪ್ರಾರಂಭವಾಗುವ ಮುಂಚೆ ಸರ್ಕಾರಕ್ಕೆ ಪಾವತಿಸಿ ಗುತ್ತಿಗೆ ನವೀಕರಣವನ್ನು ಪಡೆದುಕೊಳ್ಳುವುದು.
8. ಪ್ರತಿ ಘಟಕದ ಗುತ್ತಿಗೆ ಮೊತ್ತದ ಶೇ.25 ರಷ್ಟು ಭದ್ರತಾ ಠೇವಣಿಯಾಗಿ ಮೀನುಗಾರಿಕೆ ನಿರ್ದೇಶಕರ ಹೆಸರಿನಲ್ಲಿ ಯವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿಡಿ ಪಡೆದು ಸಲ್ಲಿಸತಕ್ಕದ್ದು.
9. ತೇಲುವ ಪಂಜರದ ಘಟಕದಿಂದ ಸಾರ್ವಜನಿಕ ಹಿತದೃಷ್ಟಿಗೆ ಧಕ್ಕೆಯಾದಲ್ಲಿ ಗುತ್ತಿಗೆ ರದ್ದುಪಡಿಸುವ ಅಧಿಕಾರವನ್ನು ಅಧಿಕಾರಯುಕ್ತ ಸಮಿತಿ ಹೊಂದಿರುತ್ತದೆ

10. ಗುತ್ತಿಗೆ ನೀಡಿದ ತೇಲುವ ಪಂಜರದ ಘಟಕವನ್ನು ಮೀನು ಕೃಷಿಗಾಗಿ ಮಾತ್ರ ಬಳಸತಕ್ಕದ್ದು. ಬೇರೆ ಯಾವುದೇ ವಾಣಿಜ್ಯ ಉದ್ದೇಶಕ್ಕಾಗಿ ಅಂದರೆ ಪ್ರವಾಸೋದ್ಯಮ ಅಥವಾ ಕ್ರೀಡಾ ಮೀನುಗಾರಿಕೆಗೆ ಇತ್ಯಾದಿ ಉದ್ದೇಶಕ್ಕಾಗಿ ಬಳಸಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸತಕ್ಕದ್ದು.
11. ಇಲಾಖೆಯು ಅನುಮತಿಸಿದ ತಳಿಯ ಮೀನುಗಳನ್ನು ಮಾತ್ರ ತೇಲುವ ಪಂಜರಗಳಲ್ಲಿ ಬೆಳಸತಕ್ಕದ್ದು.
12. ತೇಲುವ ಪಂಜರದಲ್ಲಿ ಮೀನು ಕೃಷಿ ಕೈಗೊಳ್ಳುವಾಗ ಪಂಜರಗಳಿಗೆ ಅಥವಾ ಪಂಜರದಲ್ಲಿರುವ ಮೀನುಗಳಿಗೆ ಪ್ರಾಕೃತಿಕ ವಿಕೋಪಗಳಿಂದಾಗಲೀ ಅಥವಾ ಇನ್ನಿತರ ಕಾರಣದಿಂದ ಯಾವುದೇ ಹಾನಿ / ನಷ್ಟ ಸಂಬಂಧಿಸಿದಲ್ಲಿ ಇಲಾಖೆಯಿಂದ ಯಾವುದೇ ಪರಿಹಾರ ನೀಡಲಾಗುವುದಿಲ್ಲ. ಆಗುವ ನಷ್ಟಕ್ಕೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.
13. ಗುತ್ತಿಗೆ ಪಡೆದು ಸ್ಥಾಪಿಸುವ ತೇಲುವ ಪಂಜರದ ಗುತ್ತಿಗೆಯನ್ನು ಯಾರಿಗೂ ಉಪ ಗುತ್ತಿಗೆಗೆ ನೀಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.
14. ತೇಲುವ ಪಂಜರವನ್ನು ಸ್ಥಾಪಿಸಲು ಬೇಕಾದ ಪೂರ್ಣ ಬಂಡವಾಳವನ್ನು ಸ್ವಂತ ಹಣದಿಂದ ಅಥವಾ ಬ್ಯಾಂಕಿನ ಅಥವಾ ಇತರೇ ಸಾಲದಿಂದ ಗುತ್ತಿಗೆದಾರರೇ ಭರಿಸುವುದು. ಆದರೆ, ಸರ್ಕಾರವು ನೀಡುವ ಸಹಾಯಧನ ಇತರೆ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು.
15. ಘಟಕವನ್ನು ಗುತ್ತಿಗೆ ಪಡೆದ ಆರು ತಿಂಗಳೊಳಗೆ ಪಂಜರಗಳನ್ನು ನಿರ್ಮಿಸಿ ಮೀನು ಕೃಷಿಯನ್ನು ಕೈಗೊಳ್ಳತಕ್ಕದ್ದು. ತಪ್ಪಿದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವುದು.
16. ಗುತ್ತಿಗೆ ಅವಧಿ ಮುಗಿದ ನಂತರ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಅಧಿಕಾರಯುಕ್ತ ಸಮಿತಿ ಹೊಂದಿರುತ್ತದೆ.
17. ಪ್ರತಿ ಬೆಳೆಯ ಮೀನುಮರಿ ಬಿತ್ತನೆ, ಮೀನು ಹಿಡುವಳಿ, ಮಾರಾಟ ಮತ್ತು ಆದಾಯದ ವಿವರಗಳನ್ನು ನಿಗದಿತ ನಮೂನೆಯಲ್ಲಿ ಗುತ್ತಿಗೆದಾರರು ಸಂಬಂಧಪಟ್ಟ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು / ಮೀನುಗಾರಿಕೆ ಸಹಾಯಕ ನಿರ್ದೇಶಕರವರಿಗೆ ಸಲ್ಲಿಸುವುದು.
18. ಈ ಯೋಜನೆಯ ಅನುಷ್ಠಾನದ ಬಗ್ಗೆ ಸಮಸ್ಯೆಗಳಿದ್ದಲ್ಲಿ ಅಧಿಕಾರಯುಕ್ತ ಸಮಿತಿಯಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳತಕ್ಕದ್ದು. ಒಂದು ವೇಳೆ ಭಿನ್ನಾಭಿಪ್ರಾಯ ಬಗೆಹರಿಯದಿದ್ದಲ್ಲಿ ಸರ್ಕಾರ ಈ ವಿಷಯದಲ್ಲಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಗುತ್ತಿಗೆದಾರರು ಬದ್ಧರಾಗತಕ್ಕದ್ದು.
19. ಸರ್ಕಾರವು ಕಾಲಕಾಲಕ್ಕೆ ವಿಧಿಸುವ ಇತರೆ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರತಕ್ಕದ್ದು. ಗುತ್ತಿಗೆದಾರರು ಗುತ್ತಿಗೆ ಅವಧಿಯ ವರ್ಷದ ಮಧ್ಯದಲ್ಲಿ ಗುತ್ತಿಗೆಯನ್ನು ನಿರಾಕರಿಸಿದ್ದಲ್ಲಿ ಗುತ್ತಿಗೆ ಮೊತ್ತ ಮತ್ತು ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.
20. ಇಲಾಖಾ ಅಧಿಕಾರಿಗಳು ಅಪೇಕ್ಷಿಸಿದಾಗ ಘಟಕವನ್ನು ಪರಿಶೀಲಿಸುವ ಅಧಿಕಾರವನ್ನು ಹೊಂದಿರುತ್ತಾರೆ.

21. ಮೇಲಿನ ಯಾವುದೇ ಷರತ್ತುಗಳನ್ನು, ಗುತ್ತಿಗೆದಾರರು ಉಲ್ಲಂಘಿಸಿದ್ದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು (ಅಧಿಕಾರಯುಕ್ತ ಸಮಿತಿಯು) ಕಾಯ್ದಿರಿಸಿಕೊಂಡಿರುತ್ತದೆ.

22. ಮೇಲಿನ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸುವುದಾಗಿ ಗುತ್ತಿಗೆದಾರರು ರೂ. 200/- ಮೌಲ್ಯದ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರ ಬರೆದು ಕೊಡುವುದು.

Kamakshi U.A 21/6/21

(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

21.6.2021

# ಕರ್ನಾಟಕ ಸರ್ಕಾರ
## (ಮೀನುಗಾರಿಕೆ ಇಲಾಖೆ)

## ರಾಜ್ಯದ ಆಯ್ದ ಜಲಾಶಯಗಳಲ್ಲಿ ``ತೇಲುವ ಪಂಜರಗಳಲ್ಲಿ ಮೀನು ಕೃಷಿ'' ಕೈಗೊಳ್ಳಲು ಅರ್ಜಿ

ಅರ್ಜಿ ಸಂಖ್ಯೆ

ರೂ 2000/-

| ಕ್ರ ಸಂ | ವಿವರ | |
|---|---|---|
| 1 | ವ್ಯಕ್ತಿ / ಸಂಸ್ಥೆಯ ಹೆಸರು | |
| 2 | ಪೂರ್ಣ ವಿಳಾಸ | |
| 3 | ದೂರವಾಣಿ ಸಂಖ್ಯೆ:<br>ಕಛೇರಿ<br>ಮನೆ<br>ಮೊಬೈಲ್<br>ಇ-ಮೇಲ್ ವಿಳಾಸ | |
| 4 | ವ್ಯಕ್ತಿ /ಸಂಸ್ಥೆಯ/ಪ್ರಾಯೋಜಕರ ವಿದ್ಯಾರ್ಹತೆ | |
| 5 | ಮೀನುಗಾರಿಕೆ ಕ್ಷೇತ್ರದಲ್ಲಿ ಸಾಧಿಸಿರುವ ಗಣನೀಯ ಸಾಧನೆಯ (ಏನಾದರೂ ಇದ್ದಲ್ಲಿ) ವಿವರಗಳು | |
| 6 | ಕರ್ನಾಟಕದಲ್ಲಿ ಮೀನುಮರಿ ಉತ್ಪಾದನಾ ಕೇಂದ್ರದ/ಕೆರೆ ಒಡೆತನ ಅಥವಾ ಗುತ್ತಿಗೆ ಹೊಂದಿರುವ ಬಗ್ಗೆ ದಾಖಲಾತಿಗಳು | |
| 7 | ಮೀನುಗಾರಿಕೆ/ಮೀನುಗಾರಿಕೆ ಉದ್ದಿಮೆಯಲ್ಲಿ ವ್ಯಕ್ತಿ, ಸಂಘ ಅಥವಾ ಸಂಸ್ಥೆಯ ಅಥವಾ ಅದರ ಪ್ರಾಯೋಜಕರು ಮಾಡಿರುವ ವ್ಯಾಪಾರ ವಹಿವಾಟಿನ ಬಗ್ಗೆ ಮಾಹಿತಿ(ದಾಖಲಾತಿ ಸಲ್ಲಿಸುವುದು) | |
| 8 | ತೇಲುವ ಪಂಜರ ನಿರ್ಮಿಸಲು ಉದ್ದೇಶಿಸಿರುವ ಜಲಸಂಪನ್ಮೂಲದ ಹೆಸರು | |
| 9 | ಗುತ್ತಿಗೆ ಮೊತ್ತ ಮತ್ತು ಠೇವಣಿ ಮೊತ್ತದ ಮೊಬಲಗಿಗೆ ನಗದು ಹುಂಡಿ ಲಗತ್ತಿಸಲಾಗಿದೆಯೇ? ಹಾಗಿದ್ದಲ್ಲಿ ಹುಂಡಿಗಳ ಸಂಖ್ಯೆ, ದಿನಾಂಕ ಮತ್ತು ಬ್ಯಾಂಕ್ ಹೆಸರು | |

ಮೇಲ್ಕಂಡ ಎಲ್ಲಾ ಮಾಹಿತಿಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತವೆ. ಯಾವುದೇ ಮಾಹಿತಿ ತಪ್ಪಾಗಿದ್ದಲ್ಲಿ ಈ ಬಗ್ಗೆ ನಿರ್ದೇಶಕರು, ಮೀನುಗಾರಿಕೆ ಇಲಾಖೆರವರು ತೆಗೆದುಕೊಳ್ಳುವ ನಿರ್ಧಾರಕ್ಕೆ ನಾನು ಬದ್ಧನಾಗಿರುತ್ತೇನೆ. ಅರ್ಜಿಯ ಜೊತೆಗೆಯಲ್ಲಿ ಅನುಬಂಧಿಸಲಾಗಿರುವ ನಿಯಮ ಮತ್ತು ಷರತ್ತುಗಳಿಗೆ ನಾನು ಒಪ್ಪಿರುತ್ತೇನೆ ಹಾಗೂ ಗುತ್ತಿಗೆದಾರರನಗಿ ಆಯ್ಕೆಗೊಂಡಲ್ಲಿ ಈ ಎಲ್ಲಾ ಷರತ್ತುಗಳಿಗೂ ಬದ್ಧನಾಗಿರುತ್ತೇನೆಂದು ಕರಾರು ಪತ್ರ ನೀಡಲು ಒಪ್ಪಿರುತ್ತೇನೆ.

ಸ್ಥಳ

ದಿನಾಂಕ

ಅರ್ಜಿದಾರರ ಸಹಿ

## ಅನುಬಂಧ-2

**ಕೃಷ್ಣರಾಜ ಸಾಗರದಜಲಾಶಯದಲ್ಲಿ ಮೀನುಮರಿ ಬಿತ್ತನೆ/ಮೀನುಹಿಡುವಳಿ ಮತ್ತು ಪರವಾನಗೆಯಿಂದ ಬಂದ ಆದಾಯಗಳ ವಿವರ**

| ಕ್ರ.ಸಂ | ವರ್ಷ | ಮೀನುಮರಿ ಬಿತ್ತನೆ | ಸೀಗಡಿ ಮೀನುಮರಿ ಬಿತ್ತನೆ | ಮೀನುಹಿಡುವಳಿ (ಟನ್ಸ್) | ವಿತರಿಸಿದ ಪರವಾನಗೆ ಸಂಖ್ಯೆ | ಸೀಗಡಿ ಮೀನುಮರಿ ಬಿತ್ತನೆ |
|---|---|---|---|---|---|---|
| 1 | 2017-18 | 15.97 ಲಕ್ಷ | – – | | 743 | 425 |
| 2 | 2018-19 | – – | – | – | | 724 |
| 3 | 2019-20 | 19.21 ಲಕ್ಷ | – – | | 756 | 370 |
| 4 | 2020-21 | 9.69 ಲಕ್ಷ | 2.50 ಲಕ್ಷ | 772 | 407 | 2.50 ಲಕ್ಷ |
| 5 | 2021-22 | 14.52 ಲಕ್ಷ | 3.80 ಲಕ್ಷ | 764 | 422 | 3.80 ಲಕ್ಷ |